ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 38 Udp/1263/2015-17 || R.NO.50495/91 ॥ ತಾರೀಕು : 11–10–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಮರಳಲ್ಲಿ ಮುಳುಗುವ ಪಂಚಗಂಗಾವಳಿ

ಪಂಚಗಂಗಾವಳಿ ನದಿಯಲ್ಲಿ ಮರಳು ದಿಬ್ಬಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಹೋಗಿ ಈಗ ಕುಂದಾಪುರದಲ್ಲಿ ಇಡೀ ಹೊಳೆ ಮುಚ್ಚಿಹೋಗುವ ಪರಿಸ್ಥಿತಿ ಉಂಟಾಗಿದೆ. ಮರಳಿನ ಸಣ್ಣ ಸಣ್ಣ ದಿಬ್ಬಗಳಲೆಲ್ಲಾ ಗಿಡಗಳು ಹುಟ್ಟಿ ಮರವಾಗಿ ದಿಬ್ಬಗಳ ವಿಸ್ತಾರ ಹೆಚ್ಚುತ್ತಾ ಈಗ ಇಳಿತದ ಸಮಯದಲ್ಲಿ ಬರೇ ಮರಳಿನ ಕುದುರುಗಳೇ ಕಾಣುತ್ತವೆ. ಬಬ್ಬುಕುದ್ರು ಪ್ರದೇಶಕ್ಕೆ ಈ ಮರಳು ದಿಬ್ಬಗಳ ಸಾಲು ಸೇರಿ ಈಗ ಗಂಗೊಳ್ಳಿ ಮತ್ತು ಕುಂದಾಪುರ ಬದಿ ಹೊಳೆ ಪ್ರತ್ಯೇಕವಾಗಿರುವಂತೆ ಕಾಣುತ್ತಿದೆ.


ಕುಂದಾಪುರದಲ್ಲಿ ಪಂಚಗಂಗಾವಳಿ ನಡುವೆ ಮರಳ ದಿಬ್ಬದ ಮೇಲೆಬೆಳೆಯುತ್ತಿರುವ ಕಾಡು .


ಹೊಳೆ ತುಂಬಾ ಮರಳ ದಿಬ್ಬ. ನೀರಿನ ಇಳಿತದ ಸಂದರ್ಭದಲ್ಲಿ ಬರೆ ಮರಳೇ ಕಾಣುತ್ತದೆ.

"ಮರಳು ವಿವಾದ" ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಪರಿಹರಿಸಲು ಇನ್ನೂ ವಿಳಂಬ ಧೋರಣೆ ಅನುಸರಿಸುತ್ತಿದ್ದಾಗಲೇ ಕುಂದಾಪುರ ಗಂಗೊಳ್ಳಿ ನಡುವಿನ ಪಂಚಗಂಗಾವಳಿ ಹೊಳೆ ಮರಳು ಖಾಲಿ ಮಾಡಿರೋ ಎಂದು ಕೂಗು ಹಾಕುತ್ತಿದೆ. ಗಂಗಾವಳಿ ಯಲ್ಲಿ ಮರಳದಿಬ್ಬ ಎತ್ತರಕ್ಕೆ ಅಲ್ಲಲ್ಲಿ ಬೆಳೆಯುತ್ತಾ ನದಿ ಪಾತ್ರವನ್ನೇ ಬದಲಿಸಿ ಬಿಟ್ಟಿದೆ. ದಿಬ್ಬಗಳಲ್ಲಿ ಗಿಡಗಳು ಬೆಳೆದು ಕಾಡಾಗುತ್ತಿದೆ. ಜಿಲ್ಲಾಡಳಿತ ಈ ಕಡೆ ಗಮನವೇ ಹರಿಸದಿರುವುದು ದೊಡ್ಡ ದುರಂತ.

ಸಿ.ಆರ್.ಝಡ್ ನಿಯಮಾವಳಿಗಳ ನೆಪ ಮುಂದಿಟ್ಟು ಜಿಲ್ಲಾ ಅಧಿಕಾರಿಗಳು ಹಲವೆಡೆ ಮರಳುಗಾರಿಕೆಗೆ ಆಕ್ಷೇಪ ವ್ಯಕ್ತ ಪಡಿಸುತ್ತಿದ್ದರೂ, ಪ್ರಾಕೃತಿಕ ದುರಂತ ತಪ್ಪಿಸುವ ಉದ್ದೇಶದಿಂದ ಯಾವುದೇ ಕ್ರಮ ಕೈಗೊಳ್ಳಲು ಯಾವುದೇ ನಿಯಾಮಾವಳಿಗಳು ಅಡ್ಡ ಬರುವುದಿಲ್ಲ ಎಂದು ಅಧಿಕಾರಿಗಳಿಗೆ ತಿಳಿದಿದೆ. ಆದರೆ ಈ ಯೋಜನೆಗೆ ಆರ್ಥಿಕ ವ್ಯವಸ್ಥೆ ಮಂಜೂರಾಗುವಂತೆ ರೂಪುರೇಷೆ ಮಾಡುವ ಒಂದು ಯೋಜನೆ ರೂಪಿಸುವ ಪ್ರಯತ್ನವೇ ನಡೆಯುತ್ತಿಲ್ಲ. ನಮ್ಮ ಶಾಸಕರು, ಸಂಸದರಂತೂ, ನದಿಗಳನ್ನು ಉಳಿಸುವ ನದಿ ಪಾತ್ರಗಳಲ್ಲಿ ಅಭಿವೃದ್ಧಿ ಕಾರ್ಯ ನಡೆಸುವ ವಿಷಯಗಳಲ್ಲಿ ದಿವ್ಯ ನಿರ್ಲಕ್ಷ್ಯವನ್ನೇ ತೋರುತ್ತಿದ್ದಾರೆ. ಪಂಚಗಂಗಾವಳಿ ನದಿ ಜೀವ ಕಳೆದುಕೊಂಡ ಮುಖದಂತೆ ಕೆಲವೊಮ್ಮೆ ಗೋಚರಿಸುತ್ತದೆ.

ಸೌಪರ್ಣಿಕಾ, ಖೇಟ, ಚಕ್ರನದಿಗಳು, ವಾರಾಹಿ, ಕುಬ್ಜ ನದಿಗಳೊಂದಿಗೆ ಸೇರುವಲ್ಲಿ, ವಾರಾಹಿ ಕುಬ್ಜ ನದಿಗಳು ಕುಂದಾಪುರ ಕಡೆ ಹರಿಯುವ ಹಾದಿ ಮರಳಿನಿಂದ ತುಂಬಿ ಹೋಗಿರುವುದರಿಂದ ಉತ್ತರಕ್ಕೆ ತಿರುಗಿ ಸೌಪರ್ಣಿಕಾ ನದಿಯೊಂದಿಗೆ ಸೇರಿ ಸಮುದ್ರದತ್ತ ಸಾಗುವ ಪ್ರಮೇಯ ಉಂಟಾಗಿದೆ. ಹೀಗಾಗಿ ಈ ಹೊಳೆಯ ನಡುವಿರುವ ಬಬ್ಬುಕುದ್ರು ಪ್ರದೇಶದ ಎಡಗಡೆ ನೀರೇ ಸರಿಯಾಗಿ ಹರಿಯದಂತಾಗಿ ನದಿ ನೀರು ಹಟ್ಟಿಕುದ್ರು ಬದಿಯಿಂದ ಗಂಗೊಳ್ಳಿ ಕಡೆ ಹರಿಯುತ್ತದೆ. ಜಿಲ್ಲಾಡಳಿತ ಈ ವಿಷಯದಲ್ಲಿ ಅಧ್ಯಯನಕ್ಕೊಂದು ಅಧೀಕೃತ ತಂಡ ರಚಿಸಿ ಮುಂದಿನ ಕ್ರಮ ಕೈಗೊಳ್ಳಬೇಕಾಗಿದೆ.

ಇಲ್ಲಿ ಹಲವು ಸಾವಿರದಷ್ಟು ಲಾರಿಗಳಲ್ಲಿ ತುಂಬುವಷ್ಟು ಮರಳು ಉಪಯೋಗವಿಲ್ಲದೇ ಬಿದ್ದಿರುವಾಗ, ಉಪ್ಪು ನೀರು ಮಿಶ್ರಿತ ಮರಳನ್ನು ವಿವಿಧ ಉಪಯೋಗಕ್ಕೆ ಬಳಸಲು ಉದ್ದೇಶಿಸುವವರಿಗೆ ಪ್ರಕೃತಿ ರಕ್ಷಣೆ, ಚಿಪ್ಪು, ಮತ್ಸ್ಯೋದ್ಯಮ ಉಳಿವು ಕಾರಣದಿಂದಾದರೂ ತೆಗೆಯಲು ಅನುಮತಿ ನೀಡಬೇಕು.

(11ನೇ ಪುಟಕ್ಕೆ)

## ಬರಹಗಾರರ ಅಕ್ಷರ ಸಮ್ಮೇಳನಕ್ಕೆ ಸಿದ್ಧತೆ





ಕುಂದಪ್ರಭ ಪತ್ರಿಕೆಯ ಬೆಳ್ಳಿಹಬ್ಬದ ಅಂಗವಾಗಿ ಯೋಜಿಸಿರುವ ಬರಹಗಾರರ ಅಕ್ಷರ ಸಮ್ಮೇಳನಕ್ಕೆ ಸರ್ವಸಿದ್ದತೆ ನಡೆದಿದ್ದು, ನೂರಕ್ಕೂ ಹೆಚ್ಚು ಹಿರಿಯ ಕಿರಿಯ ಬರಹಗಾರರು ಭಾಗವಹಿಸಲಿದ್ದಾರೆ.

ಕುಂದಾಪುರ ಸರಕಾರಿ ಪ.ಪೂ. ಕಾಲೇಜಿನ ರೋಟರಿ ಲಕ್ಷ್ಮೀ ನರಸಿಂಹ ಕಲಾಮಂದಿರದಲ್ಲಿ ಅಕ್ಟೋಬರ್ 23 ರಂದು ರವಿವಾರ ನಡೆಯುವ ಬರಹಗಾರರ ಸಮ್ಮೇಳನವನ್ನು ಹಿರಿಯ ಕಥೆಗಾರರಾದ ಮಾಧುರಿಕೃಷ್ಣ ಬೆಂಗಳೂರು ಉದ್ಘಾಟಿಸಲಿದ್ದಾರೆ. ಕವಿ ದುಂಡಿರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಬರಹಗಾರ, ಸಂಶೋಧಕ, ಪ್ರೊ.ಎ.ವಿ.ನಾವಡ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಅಂಬಾತನಯ ಮುದ್ರಾಡಿ, ಉಡುಪಿ ಜಿಲ್ಲಾ ಕ.ಸಾ.ಪ. ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ, ಐ.ಎಂ.ಎ. ಅಧ್ಯಕ್ಷೆ ಡಾ|ಭವಾನಿ ರಾವ್, ಸಾಹಿತಿ, ಜಾದೂಗಾರ ಓಂ ಗಣೇಶ್, ಡಾ|ಅಣ್ಣಯ್ಯ ಕುಲಾಲ್ ಮಂಗಳೂರು ಭಾಗವಹಿಸಲಿದ್ದಾರೆ.

ವೈವಿಧ್ಯಮಯ ಗೋಷ್ಠಿಗಳು ನಡೆಯಲಿದ್ದು, ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ "ಸಾಹಿತ್ಯ ಮಿಡಿತ" ಗೋಷ್ಠಿಯಲ್ಲಿ ಪ್ರಗತಿ ಶೆಟ್ಟಿ, ಚೇತನಾ ಶ್ಯಾನುಭಾಗ್, ರಾಧಿಕಾ, ಕೀರ್ತಿ ಡಿ.ಕೆ, ಭಾಗವಹಿಸಲಿದ್ದಾರೆ. ಪ್ರೊ. ನಾರಾಯಣ ರಾವ್ ಸಮನ್ವಯಕಾರರಾಗಿ ಗೋಷ್ಠಿ ನಡೆಸಿಕೊಡಲಿದ್ದಾರೆ.

"ಕುಂದನಾಡು ವೈಶಿಷ್ಟ್ಯ" ಗೋಷ್ಠಿಯ ಅಧ್ಯಕ್ಷತೆಯನ್ನು ಡಾ|ಗಾಯತ್ರಿ ನಾವಡ ವಹಿಸಲಿದ್ದಾರೆ. ಡಾ. ಭಾರತಿ ಮರವಂತೆ, ಲತಾ ಶೆಟ್ಟಿ ಮೂಡ್ಲಕಟ್ಟೆ, ಮೂರೂರು ಚಂದ್ರ ಬೆಂಗಳೂರು, ಕೋಟೇಶ್ವರ ಸೂರ್ಯ ನಾರಾಯಣ ರಾವ್, ಮಾತನಾಡಲಿದ್ದಾರೆ. ಹಿರಿಯ ಪತ್ರಕರ್ತ ಎಸ್.ಜನಾರ್ಧನ್ ಸಮನ್ವಯಕಾರಕರಾಗಿ ಕಾರ್ಯನಿರ್ವಹಿಸಲಿದ್ದಾರೆ.

"ಯಕ್ಷ–ಕಾವ್ಯ–ಕಥೆ" ಗೋಷ್ಠಿಯ ಅಧ್ಯಕ್ಷತೆಯನ್ನು ಶಾರದಾ ಭಟ್ ಉಡುಪಿ ವಹಿಸಲಿದ್ದಾರೆ. ರಾಜೇಂದ್ರ ನಾಯಕ್, ಶುಭಾ ಮರವಂತೆ, ಬಸವರಾಜ್ ಶೆಟ್ಟಿಗಾರ್, ಸಂದೀಪ ಹೆಗ್ಗದ್ದೆ, ಪ್ರಕಾಶ್ ಹೆಬ್ಬಾರ್ ನಾಡಾ, ಪುಂಡಲೀಕ ನಾಯಕ್ ಮಾತನಾಡಲಿದ್ದಾರೆ. ಬೆಳಗೋಡು ರಮೇಶ್ ಭಟ್ ಸಮನ್ವಯಕಾರಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ನರೇಂದ್ರ ಕುಮಾರ್ ಕೋಟ ಕಾರ್ಯಕ್ರಮ ನಿರೂಪಿಸಲಿದ್ದಾರೆ.

"ಬರಹ–ಪ್ರಕಟಣೆ–ಓದು–ವಿಮರ್ಶೆ" ವಿಷಯದಲ್ಲಿ ನಡೆಯುವ "ಪಟ್ಟಾಂಗ" ಸಂವಾದ ಗೋಷ್ಠಿಯಲ್ಲಿ ಉಪೇಂದ್ರ ಸೋಮಯಾಜಿ, ಮಾಲಿನಿ ಮಲ್ಯ, ಡಾ|ಉಮೇಶ್ ಪುತ್ರನ್, ಡಾ|ಭಾಸ್ಕರ ಆಚಾರ್ಯ, ಡಾ|ಎಚ್.ಆರ್.ಹೆಬ್ಬಾರ್,, ಕು.ಗೋಪಾಲ್ ಭಟ್, ಆನಂದ, ಅಶೋಕ್ ತೆಕ್ಕಟ್ಟೆ, ತಾರಾಭಟ್, ಸಂಧ್ಯಾ ಶೆಣೈ, ಇಂದಿರಾ ಹಾಲಂಬಿ, ಪೂರ್ಣಿಮಾ ಭಟ್, ಸತೀಶ ಕೆಮ್ಮಣ್ಣು, ವೈ.ಎನ್.ವೆಂಕಟೇಶ ಮೂರ್ತಿ ಭಟ್ಟ, ಬರ್ನಾಡ್ ಡಿ'ಕೋಸ್ತ, ಸುಬ್ರಹ್ಮಣ್ಯ ಶೆಟ್ಟಿ, ರಂಜಿತ್ ಕುಮಾರ್ ಶೆಟ್ಟಿ ವಕ್ವಾಡಿ, ಡಾ.ಕೃಷ್ಣರಾಜ ಕರಬ, ಕೆ.ಕೆ.ಕಾಳಾವರ್. ಅಂಶುಮಾಲಿ, ಗಣಪತಿ ಹೋಬಳಿದಾರ್, ಚಂದ್ರ ಹೆಮ್ಮಾಡಿ, ಡಾ| ಕಿಶೋರ್ ಕುಮಾರ್, ಪಂಜು ಬಿಲ್ಲವ

(7ನೇ ಪುಟಕ್ಕೆ)

ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ
ವಸಂತ ಬೇಕರಿ

ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ
ಫೋನ್ : 08254–230503, ಮೊ: 9448171188


VACATION CRASH COURSE FOR SSLC
Our top Achievers of 2015

Starts on April 1st
Excellent teaching faculty
Top results
Join the NO. 1 Coaching class of Kundapura and get unparallel results
For more details visit www.sginstitutes.com
Saraswathi Group Of Institutes
1st Floor, Sri Ganesh Prasad, West Block Road, Kundapura-576201
Ph: 9916034605, 9141138705